## ಸೂಪರ್ ಸುಬ್ಬಲಕ್ಷ್ಮಿ

ಝೀ ಕನ್ನಡ ವಾಹಿನಿಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ 'ಸುಬ್ಬಲಕ್ಷ್ಮಿ ಸಂಸಾರ' ಮೊದಲ ಸಂಚಿಕೆಯಿಂದಲೇ ಗಮನ ಸೆಳೆಯುತ್ತಿದೆ. ಎಂದೂ ಧಾರಾವಾಹಿ ನೋಡದ ನಾನು ಮೊದಲ ಎಪಿಸೋಡ್ ನೋಡಿ ಖುಷಿಪಟ್ಟೆ. ಚುರುಕಾದ ಹಾಸ್ಯಭರಿತ ಸಂಭಾಷಣೆ, ಬಿಗಿಯಾದ ಸಂಕಲನ ಮತ್ತು ಕಲಾವಿದರ ಸಹಜ ನಟನೆ, ದಕ್ಷ ನಿರ್ದೇಶನ, ಪೂರಕ ಸಂಗೀತ ಎಲ್ಲವೂ ಅಚ್ಚುಕಟ್ಟಾಗಿ ಮೂಡಿ ಬರುತ್ತಿದೆ. ಎಲ್ಲಿಯೂ ಬೇಸರ ಮೂಡಿಸದಂತೆ ಸರಾಗ ಓಟದಲ್ಲಿ ಹೀಗೇ ಮುಂದುವರಿದರೆ ಯಶಸ್ವಿ ಧಾರಾವಾಹಿ ಆಗುವುದರಲ್ಲಿ ಸಂದೇಹವಿಲ್ಲ.

—ಮಂಜುನಾಥ್ ಸಿ.ನೆಟ್ಕಲ್, ಬೆಂಗಳೂರು

## ವಿಷಯ ಪರಿಣಿತರಿರಲಿ

ದೃಶ್ಯ ಮಾಧ್ಯಮಗಳಲ್ಲಿ ಕೆಲವು ನಿರೂಪಕ/ನಿರೂಪಕಿಯರು ಯಾವುದೇ ವಿಷಯದ ಬಗ್ಗೆಯಾದರೂ ನಿರರ್ಗಳವಾಗಿ ಮಾತನಾಡುತ್ತಾರೆ. ಆದರೆ ಚರ್ಚೆಯಲ್ಲಿ ಭಾಗವಹಿಸುವವರಲ್ಲಿ ಕೆಲವರು ಕಾಯಂ. ಅವರು ಗಡಿ ಸಮಸ್ಯೆಯ ಚರ್ಚೆ, ಬೆಂಗಳೂರಿನ ಅತ್ಯಾಚಾರದ ಚರ್ಚೆ, ಆಹಾರದಲ್ಲಿ ಕಲಬೆರಕೆ ಅಥವಾ ಪ್ಲಾಸ್ಟಿಕ್ ಅಕ್ಕಿ, ಆರ್.ಟಿ.ಇ. ಚರ್ಚೆ ಎಲ್ಲದರಲ್ಲೂ ಭಾಗಿಯಾಗುತ್ತಾರೆ. ದೃಶ್ಯಮಾಧ್ಯಮದವರೇ ಆಯಾಯ ಕ್ಷೇತ್ರದ ಪರಿಣಿತರನ್ನೇ ಕರೆಸಿ ಚರ್ಚೆ ನಡೆಸಿದರೆ ಅದಕ್ಕೊಂದು ಅರ್ಥ ಬರುತ್ತದೆ.

—ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ, ಬೆಂಗಳೂರು

## ಇತಿಮಿತಿ ಇದ್ದರೆ ಪರಿಹಾರ

'ಝೀ' ಟಿವಿ ಕನ್ನಡ ವಾಹಿನಿಯಲ್ಲಿ ಮಧ್ಯಾಹ್ನ 2– 3ರವರೆಗೆ ಶೈಲಜಾ ಸಂತೋಷ್‌ರವರು ನಡೆಸಿಕೊಡುವ ಸಾಮಾಜಿಕ ಸಮಸ್ಯೆಗಳು ಮತ್ತು ಪರಿಹಾರ ಕಾರ್ಯಕ್ರಮದಲ್ಲಿ ನಾಲ್ಕು ಮಂದಿ ವೈದ್ಯರು ಸಮಸ್ಯೆಗಳಿಗೆ ಸ್ಪಂದಿಸಿ ಉತ್ತರ ನೀಡುತ್ತಾರೆ. ಪ್ರಸ್ತುತ ಇದೊಂದು ಒಳ್ಳೆಯ ಕಾರ್ಯಕ್ರಮ ಎನ್ನಬಹುದು.

ಕೂದಲು ಉದುರುವಿಕೆಗೆ ಪರಿಹಾರ, ಮಕ್ಕಳ ಕೈಗೆ ಮೊಬೈಲ್ ಕೊಡುವುದು ಸರಿಯೆ? ಕುರಿತು ಚರ್ಚೆ ತುಂಬಾ ಚೆನ್ನಾಗಿ ಮೂಡಿಬಂದಿದೆ. ಕಳೆದ ಶನಿವಾರ ಥೈರಾಯ್ಡ್ ಏರುಪೇರಾದಾಗ ಆಗುವ ತೊಂದರೆ ಮತ್ತು ಪರಿಹಾರವನ್ನು ತಿಳಿಸುವ ಜೊತೆಗೆ ಅದರ ಬಗ್ಗೆ ಇದ್ದ ಅನೇಕ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿದರು.

—ಮಧುರ ಸುಬ್ರಹ್ಮಣ್ಯ, ಬೆಂಗಳೂರು

ವಾರದ ಪತ್ರ

## ಸಕಾಲಿಕ ಕಾರ್ಯಕ್ರಮ

ಚಂದನವಾಹಿನಿಯ ಆರೋಗ್ಯ ಕಾರ್ಯಕ್ರಮದಲ್ಲಿ ಡಾ.ರಜನಿ ಮತ್ತು ಡಾ.ರವಿಶಂಕರ್ ಅವರ ಸಂದರ್ಶನ ಅತ್ಯಂತ ಉಪಯುಕ್ತವಾಗಿತ್ತು. ಅತಿಸಾರ ಭೇದಿ ನಿಯಂತ್ರಣ ಪಾಕ್ಷಿಕ (ಜೂನ್ 12 ರಿಂದ 24) ಆಚರಣೆ ಕುರಿತ ಕಾರ್ಯಕ್ರಮದಲ್ಲಿ ಶಿಶು ಮರಣದ ಪ್ರಮಾಣದ ಬಗ್ಗೆ ನೀಡಿದ ಮಾಹಿತಿ ವಿಶೇಷವಾಗಿ ಗ್ರಾಮಾಂತರ ಪ್ರದೇಶದ ಮಹಿಳೆಯರಿಗೆ ಅತ್ಯಮೂಲ್ಯ ಮಾಹಿತಿಯಾಗಿತ್ತು. ಅತಿಸಾರ ಭೇದಿಯಾಗುವ ಮಗುವಿನಲ್ಲಿ ಕಾಣುವ ಚಿಹ್ನೆಗಳು. ನಿರ್ಜಲೀಕರಣ ಚಿಹ್ನೆಗಳು, ಓಆರ್‌ಎಸ್ ದ್ರಾವಣದ ಪ್ರಾಮುಖ್ಯತೆ, ದ್ರಾವಣ ಸಿದ್ಧಪಡಿಸುವ ವಿಧಾನ, ಬಳಸುವ ವಿಧಾನ, ಭೇದಿಯ ಲಕ್ಷಣಗಳು, ಝಿಂಕ್ ಮಾತ್ರೆ ಬಳಸುವ ವಿಧಾನ ಅವುಗಳ ಬಗ್ಗೆ ನೀಡಿದ ಸವಿಸ್ತಾರವಾದ ಮಾಹಿತಿ, ಹುಟ್ಟಿದ ಮಕ್ಕಳಿಗೆ ಗ್ಲುಕೋಸ್ ಹಾಗೂ ಜೇನುತುಪ್ಪ ನೀಡುವ ಹಳೇ ಸಂಪ್ರದಾಯ ಕುರಿತ ತಿಳುವಳಿಕೆ ತುಂಬಾ ಸಕಾಲಿಕವಾಗಿತ್ತು. ಆರೋಗ್ಯದ ಬಗ್ಗೆ ಜನರಲ್ಲಿ ಜಾಗೃತಿ ಉಂಟುಮಾಡುವ ಕಾರ್ಯಕ್ರಮ ಅತ್ಯಂತ ಮಹತ್ವಪೂರ್ಣವಾಗಿತ್ತು.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಹೊಸ ಪ್ರತಿಭೆ ಗೀತಾ

'ಝೀ' ವಾಹಿನಿಯಲ್ಲಿ ಶೃತಿ ನಾಯ್ಡುರವರ ಧಾರಾವಾಹಿ 'ಬ್ರಹ್ಮಗಂಟು' ಪ್ರಾರಂಭವಾಗಿದೆ. ಕಥೆಗಳು ಪ್ರಾರಂಭವಾಗುವಾಗ, ಕುತೂಹಲಗಳಿಂದ ಕೂಡಿರುತ್ತವೆ. ಕಥೆಯು ಕೂಡ ದಾರಿತಪ್ಪದೇ ನಡೆಯುತ್ತಿರುತ್ತದೆ. ಆದರೆ ಕೆಲದಿನಗಳ ನಂತರ ಧಾರಾವಾಹಿಗಳು ಪ್ರಾರಂಭವಾಗಿದ್ದ ಎಳೆಯನ್ನೇ ಮರೆತು ಚಲಿಸುತ್ತವೆ. ಉದಾ: ಮಹಾನದಿ ಹೀರೋ/ವಿಲನ್ ಎರಡು ಕೂಡ ಒಬ್ಬನೇ. ಕೊಲೆಯ ಸುತ್ತು ಸೇಡಿನ ಸುತ್ತ ಪ್ರಾರಂಭವಾದ ಧಾರಾವಾಹಿ ಈಗ ಅಕ್ಕ ತಂಗಿಯರ ಕಚ್ಚಾಟದಲ್ಲಿದೆ. 'ಬ್ರಹ್ಮಗಂಟು' ಚೆನ್ನಾಗಿ ಪ್ರಾರಂಭವಾಗಿದೆ. ಯಾವ ತಿರುವು ಪಡೆಯುತ್ತದೋ ಗೊತ್ತಿಲ್ಲ. ಆದರೆ 'ಬ್ರಹ್ಮಗಂಟು'ವಿನ ಮುಖ್ಯ ಪಾತ್ರಧಾರಿ ಗೀತಾ ನಟನೆ ಮಾತ್ರ ಸೂಪರ್ ಆಗಿದೆ.

—ಸುಮತಿ ಟಿ.ಎನ್., ತಿಪಟೂರು

## ಕಿರುತೆರೆಯಿಂದ ಹಿರಿತೆರೆಗೆ

ಕಿರುತೆರೆಯಲ್ಲಿ ಜನಪ್ರಿಯ ಧಾರಾವಾಹಿಗಳ (ಪಲ್ಲವಿ ಅನುಪಲ್ಲವಿ, ಮಿಲನ, ಅನುರೂಪ ) ಸರಣಿಯನ್ನೇ ನೀಡಿದ ಕಿರುತೆರೆ ನಿರ್ದೇಶಕ ಬಿ . ಮಧುಸೂಧನ ಅವರು ಹಿರಿತೆರೆಗೆ 'ಆ ಎರಡು ವರ್ಷಗಳು' ಚಿತ್ರದ ಮೂಲಕ ಮೊದಲ ಪ್ರಯತ್ನ ಮಾಡಿದ್ದಾರೆ. ಸಾಮಾನ್ಯ ವಿಷಯವನ್ನೇ ಅಸಾಮಾನ್ಯವಾಗಿ ಚಿತ್ರಿಸಿ ಯಶಸ್ಸು ಕಂಡಿರುವ ಕಿರುತೆರೆ ನಿರ್ದೇಶಕರಿಗೆ ಯಶಸ್ಸು ಸಿಗಲಿ. ಹಾಗೆಯೇ ಕಿರುತೆರೆಯಲ್ಲೂ ಮುಂದುವರಿಯಲಿ.

—ವೀಣಾ ಅತ್ರೇಯ

## ಆದರ್ಶ ದಂಪತಿ ಸುಧಾರಿಸಲಿ

'ಆದರ್ಶ ದಂಪತಿ'ಗಳು ಕಾರ್ಯಕ್ರಮ ಉದಯ ಟಿವಿಯಲ್ಲಿ ದಶಕಗಳಿಂದ ಮೂಡಿಬರುತ್ತಿದೆ. ಉದಯ ಟಿವಿಯ ಆರಂಭದಲ್ಲಿ ಪ್ರತಿಷ್ಠಿತ ಕಾರ್ಯಕ್ರಮವಾಗಿ ಇದ್ದದ್ದು ಈಗ ಅಷ್ಟೊಂದು ಚೆನ್ನಾಗಿಲ್ಲ. ಈಗಿನ ನಿರೂಪಕರಾಗಿರುವ ಸಿಹಿ ಕಹಿ ದಂಪತಿಯ ಮಾತುಗಳು ಕೆಲವೊಮ್ಮೆ ನೋಡುಗರಿಗೆ 'ಅತೀ' ಅನ್ನಿಸುತ್ತವೆ. ಇನ್ನು ಕಾರ್ಯಕ್ರಮದಲ್ಲಿ ದಂಪತಿಗೆ ನೀಡುವ ಹಲವು ಚಟುವಟಿಕೆಗಳು 'ವಾಕರಿಕೆ' ತರಿಸುತ್ತವೆ. ವಯಸ್ಸಾದ ದಂಪತಿಗೆ ಒಂದೇ ಸೇಬನ್ನು ಕಚ್ಚುವಂತೆ ಹೇಳುವುದು, ಹೆಂಡತಿಯನ್ನು ಎತ್ತಿ ಕುರ್ಚಿಯಲ್ಲಿ ಕೂರಿಸುವುದು.. ಇಂತಹವು ವೀಕ್ಷಕರಿಗೆ ನೋಡಲು ಮುಜುಗರ ಎನಿಸುತ್ತವೆ.

ಚಂದನದ (ಪ್ರತೀ ಸೋಮವಾರ) 'ಸುಖ–ಸಂಪದ' ತುಂಬಾ ಚೆನ್ನಾಗಿ ಬರುತ್ತದೆ. ಇದರಲ್ಲಿ ಜೀವನದ ಹಲವು ಮಜಲುಗಳನ್ನು ನೋಡುಗರಿಗೆ ತೆರೆದಿಡುತ್ತಾರೆ. ತಮ್ಮ ಬಾಳಿನ ಕಷ್ಟ–ಕೋಟಲೆಗಳನ್ನು ಹೇಗೆ ಒಟ್ಟಾಗಿ ನಿಭಾಯಿಸಿದರು ಅಂತ ಮನಬಿಚ್ಚಿ ವೀಕ್ಷಕರಿಗೆ ವಿವರಿಸುತ್ತಾರೆ. ಇದರಿಂದ ನೋಡುಗರ 'ಜೀವನ ಕೌಶಲ್ಯ' ವೃದ್ಧಿಯಾಗುತ್ತದೆ. ಈ ಮಾದರಿಯನ್ನ ಎಲ್ಲ ಚಾನೆಲ್‌ಗಳೂ ಏಕೆ ಅನುಸರಿಸಬಾರದು?

—ಸಂಜನಾ ಎನ್., ಬೇಗೂರು

## ಹೊಸ ಬಾಟಲಿ ಹಳೇ ಮದ್ಯ

ಝೀ ವಾಹಿನಿಯಲ್ಲಿ ಪ್ರಸಾರಗೊಂಡ ಕಾಮಿಡಿ ಕುಟುಂಬ ಅದೇ ಹಳೇ ಪಾತ್ರ, ಹಳೆ ತಗಡು.. ಪ್ರಾರಂಭದಲ್ಲಿ ಜಗ್ಗೇಶರು ಮಠ ಚಿತ್ರದಲ್ಲಿ ತಮ್ಮ ತಂಡದೊಂದಿಗೆ ಕರಿಪ್ಯಾಂಟ್, ಕೋಟು ಧರಿಸಿ ಬಂದಂತೆ ಕಾಮಿಡಿ ಕುಟುಂಬವು ಬರುತ್ತದೆ. ಸುಬ್ಬಲಕ್ಷ್ಮಿ ಸಂಸಾರದಲ್ಲಿ ಸುಬ್ಬಲಕ್ಷ್ಮಿ ಅಭಿನಯ ಸೂಪರ್ ಆಗಿದೆ. ಧಾರಾವಾಹಿ ನಿಂತಿರುವುದೇ ಪ್ರಧಾನ ಪಾತ್ರದ ಮೇಲೆ. ರಮೇಶ್ ಭಟ್ಟರ ಪಾತ್ರವನ್ನು ಯಾರು ಬೇಕಾದರೂ ಮಾಡಬಹುದಿತ್ತು. ನಿಹಾಲ್ ಸಾಗರ್ ಡ್ರಾಮಾ ಗುಂಗಿನಿಂದ ಹೊರಬಂದಿಲ್ಲ. ಈತನ ಸಹಪಾಠಿಯಾಗಿ ರೇ(ಲೇ)ವತಿಯನ್ನು ತೆಗೆದುಕೊಳ್ಳಬಹುದಿತ್ತು. ವಿವಾಹೇತರ ಸಂಬಂಧ ಪತಿ ಪತ್ನಿ ಔರ್ ವೋ ಕಥೆ ಹೊಂದಿರುವ ಇದು ಎಂದೆಂದಿಗೂ ಪ್ರಸ್ತುತ. ಗಂಗಾದ ಮನೆ ಒಡತಿ ಕಚ್ಚೆ ಸೀರೆಯಲ್ಲಿ ಕಂಗೊಳಿಸಿದಂತೆ ಆಧುನಿಕ ಉಡುಗೆಯಲ್ಲೂ ಕಂಗೊಳಿಸಿದ್ದಾರೆ. ಆಕೆ ಗಂಡ 'ಅಪ್‌ಡೇಟ್' ಆಗಿಲ್ಲ. ಅಜ್ಜಮ್ಮಾ ಮಡಿವಂತಿಕೆ ತೊರೆದಿಲ್ಲ.

—ಎಸ್.ಎನ್. ಮಹಾಬಲ ರಾವ್, ನರಸಿಂಹರಾಜಪುರ